# ಸ್ಮರಣೆ ಒಂದೇ ಸಾಲದೆ ಗೋವಿಂದನ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 70
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 573
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 45
4. Note: Lyrics given without highlights are as per Ref. 2. Lyrics given in yellow highlights are as per Ref. 1. The wordings in Ref. 3 are slightly different and are not considered here.
5. **Note:** Singer has followed lyrics as in Ref. 2.

ರಾಗ: ಮಲಯಮಾರುತ ತಾಳ: ರೂಪಕ

ಸ್ಮರಣೆ ಒಂದೇ ಸಾಲದೆ ಗೋವಿಂದನ
ನಾಮ ಒಂದೇ ಸಾಲದೆ ॥ ಪ ॥

ಪರಮ ಪುರುಷನನ್ನು ನೆರೆ ನಂಬಿದವರಿಗೆ
ದುರಿತ ಬಾಧೆಗಳ ಗುರುತು ತೋರುವುದೆ ॥ ಅಪ ॥

ಕಡು ಮೂರ್ಖನಾದರೇನು ದುಷ್ಕರ್ಮದಿಂ
ತೊಡೆದಾತನಾದರೇನು
ಜಡನಾದರೇನಲ್ಪಜಾತಿಯಾದರೇನು
ಬಿಡದೆ ಪ್ರಹ್ಲಾದನ್ನ ಸಲಹಿದ ಹರಿಯ ॥ ೧ ॥

ಪಾತಕಿಯಾದರೇನು ಸರ್ವಪ್ರಾಣಿ
ಘಾತಕಿಯಾದರೇನು
ನೀತಿಯ ಬಿಟ್ಟು ದುಷ್ಕರ್ಮಿಯಾದರೇನು
ಪ್ರೀತಿಯಿಂದಜಾಮಿಳನ ಸಲಹಿದ ಹರಿಯ ॥ ೨ ॥

ಸಕಲ ತೀರ್ಥಯಾತ್ರೆಯ ಮಾಡಿದಂಥ
ನಿಖಿಲ ಪುಣ್ಯದ ಫಲವು
ಭಕುತಿ ಪೂರ್ವಕವಾಗಿ ಬಿಡದನುದಿನದಲ್ಲಿ
ಪ್ರಕಟ ಪುರಂದರ ವಿಠಲನ ನಾಮದ ॥ ೩ ॥

ರಾಗ: ಕಲ್ಯಾಣಿ ತಾಳ: ಅಟ

ಸ್ಮರಣೆಯೊಂದೆ ಸಾಲದೆ ಗೋವಿಂದನ
ಸ್ಮರಣೆಯೊಂದೆ ಸಾಲದೆ

ಪರಿಪರಿ ಸಾಧನ ಭ್ರಾಂತಿಯ ಬಿಡಿಸುವ
ಪರಮಾತ್ಮನ ಪಾದ ನೆರೆನಂಬಿದವರಿಗೆ

ಕಡು ಮೂರ್ಖನಾದರೇನು ದಾನ ಧರ್ಮ
ಕೊಡದಾತನಾದರೇನು
ಬಡವನಾದರೇನು ವಿಜಾತಿಯಾದರೇನು
ಒಡನೆ ಪ್ರಹಲ್ಲಾದನುದ್ಧರಿಸಿದ ಶ್ರೀ ಹರಿಯ

ಪಾತಕಿಯಾದರೇನು ಸರ್ವ-ಲೋಕ
ಘಾತಕಿಯಾದರೇನು
ಮಾತೆಯಂದದಿ ತನ್ನ ದಾಸರ ಸಲಹುವ
ಚೇತನಾತ್ಮಕ ಪಾದವ ನೆರೆನಂಬಿದವರಿಗೆ

ಪಾತಕ ವೆಗ್ಗಳವೊ, ನಾಮವು ಪ್ರಾಯ-
ಶ್ಚಿತ್ತಕೆ ವೆಗ್ಗಳವೊ
ಪಾತಕವೆನಗಿಲ್ಲ ಪ್ರಾಯಶ್ಚಿತ್ತ ಮುನ್ನಿಲ್ಲ
ಏತರ ಭಯವಯ್ಯ ಪುರಂದರ ವಿಠ್ಠಲನ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಎಲ್ಲಾ ಧರ್ಮ ಸಾಧನೆಗಳಲ್ಲಿಯೂ ಶ್ರೀ ಹರಿ ನಾಮ ಸ್ಮರಣೆಯೆ ಶ್ರೇಷ್ಠ ಸಾಧನವೆಂದು ದಾಸರು ಸಾರಿದ್ದಾರೆ. ನಾಮ ಸ್ಮರಣೆಯಿಂದ ಜಾತಿ, ಪಂಥ, ಕುಲ, ಪಾಪ, ಮುಂತಾದವು ಯಾವ ಭೇದಗಳೂ ಉಳಿಯವೆಂಬುದು ದಾಸರ ಅಭಿಪ್ರಾಯ.

**ಚೇತನಾತ್ಮಕ** = ಚಿನ್ಮಯ, ಚಿತ್ ಸ್ವರೂಪ

**ವೆಗ್ಗಳ** = ಅತಿಶಯ

**ಪರಿಪರಿ ವಿಧವೆಲ್ಲ** – ಪ್ರಪಂಚದ ಹಲವು ಪ್ರಸಕ್ತಿಗಳೆಲ್ಲ.

**ನೆರೆನಂಬಿದವರಿಗೆ**– ಚೆನ್ನಾಗಿ (ಅನನ್ಯನೆಂದು) ಶ್ರದ್ಧೆಯಿಟ್ಟವರಿಗೆ.

**ಜಡನಾದರೇನು** – ಮೂರ್ಖನಾದರೇನು.

**Classification:** Keerthane
**Ankita:** purandara vittala
**Location:** NA
**Category:** Nama Smarane, Artha Bhava
**Sub-Category:** smarane, govinda, paramatma, murkha, dana, dharma, badava, kula, prahallada, Krishna, loka, tayi, bhaya, karma, prani, ajamila, punya, tirtha, phala,
**Pravachana:** NA
**Explanation:** NA